ಉಪಾಧ್ಯಕ್ಷೆಣಿಯವರು :– ಮಾನ್ಯ ಮಂತ್ರಿಗಳು ಹೇಳಿದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು. ಈ ಪ್ರಶ್ನೆಯನ್ನು ಡಿ.ಪಿ.ಎ.ಆರ್.ಗೆ ಕಳುಹಿಸಿದ್ದೇವೆ. ಅದಕ್ಕೆ ಸಂಬಂಧಪಟ್ಟಮಂತ್ರಿಗಳೇ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಇದು ಬಹಳ ಮಹತ್ವದ ಪ್ರಶ್ನೆ. ಈ ವಿಷಯದಲ್ಲಿ ಏನಾದರೊಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಸದನದಲ್ಲಿ ಒಂದು ಹೇಳಿಕೆಯನ್ನು ನೀಡಬೇಕಾಗುತ್ತದೆ. ಸುಮ್ಮನೆ ಹೊರಗಡೆ ಹೇಳಿಕೊಂಡು ಹೋದರೆ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷೆಣಿಯವರು :– ಒಬ್ಬೊಬ್ಬರೇ ನಿಂತು ಮಾತನಾಡಿ....

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :– ಕಳೆದ 5–6 ದಿವಸದಿಂದ ಪ್ರಶ್ನೋತ್ತರ ಕಾಲದಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಪ್ರಶ್ನೆಗಳಿಗೆ ಉತ್ತರಗಳೇ ಬರುತ್ತಿಲ್ಲ. ಅವುಗಳನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗಾಯಿಸಿದ್ದೇವೆಂದು ಹೇಳುತ್ತಿದ್ದೀರಿ. ಈಗ ಸುಮಾರು 90 ಪರ್ಸೆಂಟ್ ಮಂತ್ರಿ ಮಂಡಲ ರಚನೆಯಾಗಿದೆ. ಈಗ ಈ ರೀತಿ ಉತ್ತರವನ್ನು ಕೊಡತಕ್ಕದ್ದು ಸರಿಯಾದ ಕ್ರಮವಲ್ಲ.

ಉಪಾಧ್ಯಕ್ಷೆಣಿಯವರು :– ಇದು ಡಿ.ಪಿ.ಎ.ಆರ್.ಗೆ ಸಂಬಂಧಪಟ್ಟ ವಿಷಯ ಮತ್ತು ಸರ್ವಿಸ್ ಮ್ಯಾಟರ್‌ಗೆ ಸಂಬಂಧಪಟ್ಟದ್ದು. ಇದಕ್ಕೆ ಡಿ.ಪಿ.ಎ.ಆರ್.ನವರೇ ಮಾಹಿತಿಗಳನ್ನು ಒದಗಿಸಬೇಕಾಗುತ್ತದೆ : ಅಲ್ಲದೆ ಅದಕ್ಕೆ ಸಂಬಂಧಪಟ್ಟಮಂತ್ರಿಗಳೇ ಉತ್ತರವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಇದನ್ನು ಮುಂದಕ್ಕೆ ಹಾಕಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಇದು ಸಮಾಜ ಕಲ್ಯಾಣ ಇಲಾಖೆಗೆ ಬರುತ್ತದೆ...

(ಗೊಂದಲ)

ಉಪಾಧ್ಯಕ್ಷೆಣಿಯವರು :– ಈ ಪ್ರಶ್ನೆಯನ್ನು ಸಂಬಂಧಪಟ್ಟ ಇಲಾಖೆಗೆ ವರ್ಗಾವಣೆ ಮಾಡಿದೆ.

(ಗೊಂದಲ)

ಉಪಾಧ್ಯಕ್ಷೆಣಿಯವರು :– ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಈ ಪ್ರಶ್ನೆಗೆ ಅವರು ಯಾವಾಗ ಉತ್ತರವನ್ನು ಕೊಡುತ್ತಾರೆಂದು ಹೇಳಬೇಕು. ಏಕೆಂದರೆ ಇದು ಬಹಳ ಮಹತ್ವದ ಪ್ರಶ್ನೆ.

ಉಪಾಧ್ಯಕ್ಷೆಣಿಯವರು : ಸಂಬಂಧಪಟ್ಟ ಇಲಾಖೆಯಿಂದ ಉತ್ತರ ಬಂದಕೂಡಲೇ ತೆಗೆದುಕೊಳ್ಳಲಾಗುತ್ತದೆ.

(ಗೊಂದಲ)

ಚುಪ್ರ 181(586)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ದೇವದಾಸಿಯರ ಪುನರ್‌ವಸತಿ ಕುರಿತು

584. ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ದೇವದಾಸಿಯರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡಬೇಕು).

ಆ) ಅವರುಗಳ ಪುನರ್ ವಸತಿಗಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಇ) ಇದುವರೆವಿಗೂ ಯಾವುದೇ ರೀತಿ ಸದರಿ ದೇವದಾಸಿಯರಿಗೆ ಸಹಾಯವಾಗದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಅ) 1989–90ನೇ ಸಾಲಿನ ಸಮೀಕ್ಷೆಯ ಪ್ರಕಾರ ಒಟ್ಟು ಸಂಖ್ಯೆ : 14197

ಬೆಳಗಾಂ	:	3737
ಬಿಜಾಪುರ	:	4895
ಧಾರವಾಡ	:	2503
ರಾಯಚೂರು	:	1089
ಗುಲ್ಬರ್ಗ	:	318
ಬಳ್ಳಾರಿ	:	1635
ಬೀದರ್	:	20
ಒಟ್ಟು	:	14197

ಆ) 1) ಸರ್ಕಾರವು ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಲು ಶಾಸನವನ್ನು ಮಾಡಿರುತ್ತದೆ.

2) ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯ ಕೇಂದ್ರ ಕಛೇರಿಯಲ್ಲಿ ದೇವದಾಸಿ ಪದ್ಧತಿ ಹಾಗು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಲು ಒಂದು ವಿಶೇಷ ಘಟಕವನ್ನು ತೆರೆಯಲಾಗಿದೆ.

3) ಸರ್ಕಾರವು ದೇವದಾಸಿ ಮಕ್ಕಳಿಗಾಗಿ ಶಿಕ್ಷಣ, ಆಶ್ರಯ, ತರಬೇತಿ ಮತ್ತು ಪುನರ್‌ವಸತಿ ಒದಗಿಸಲು ಅಥಣಿಯಲ್ಲಿ ಬಾಲಮಂದಿರವನ್ನು ಸ್ಥಾಪಿಸಿದೆ.

4) ದೇವದಾಸಿಯರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರ್ಕಾರದ ಯೋಜನೆಗಳಾದ ಗೃಹ ಕಲ್ಯಾಣ, ಐ.ಆರ್.ಡಿ.ಪಿ. ಯೋಜನೆಗಳನ್ನುಹಾಕಿಕೊಳ್ಳಲಾಗಿದೆ.

5) ದೇವದಾಸಿಯರ ವಿವಾಹವನ್ನು ಪ್ರೋತ್ಸಾಹಿಸಲು ಪ್ರತಿ ದಂಪತಿಗೆ ರೂ.3000–00 ವನ್ನು ಕೊಡಲಾಗುತ್ತಿದೆ. ಇಲ್ಲಿಯತನಕ ಸುಮಾರು 258 ದೇವದಾಸಿ ದಂಪತಿಗಳು ಇದರ ಅನುಕೂಲವನ್ನು ಪಡೆದುಕೊಂಡಿರುತ್ತಾರೆ.

6) ಕರಪತ್ರಗಳು, ಬಿತ್ತಿಪತ್ರಗಳು, ರೇಡಿಯೋಗಳು ಹಾಗೂ ದೂರದರ್ಶನ ಕಾರ್ಯಕ್ರಮಗಳ ಮೂಲಕ ದೇವದಾಸಿ ಪದ್ಧತಿಯ ಹೀನ ಪ್ರವೃತ್ತಿಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದೆ.

7) ದೇವದಾಸಿ ಪದ್ಧತಿಯ ಬಗ್ಗೆ ಒಂದು ಸಾಕ್ಷ್ಯ ಚಿತ್ರವನ್ನು ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯು ಸಿದ್ಧಪಡಿಸಿದೆ.

8) ಮಹಿಳಾ ಅಭಿವೃದ್ಧಿ ನಿಗಮವು ದೇವದಾಸಿಯರ ಪುನರ್:ವಸತಿಗಾಗಿ ಕೇಂದ್ರ ಸರ್ಕಾರದ ವಿಶೇಷ ಸಹಾಯ ಹಾಗೂ ವಿಶೇಷ ಘಟಕ ಯೋಜನೆಯ ಹಣದಿಂದ 6 ಜಿಲ್ಲೆಗಳಲ್ಲೂ ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ದೇವದಾಸಿಯರ ಮಕ್ಕಳಿಗೆ ನವೋದಯ ಮಾದರಿಯ ಶಾಲೆಗಳ ಮೂಲಕ ಶಿಕ್ಷಣ, ಆರ್ಥಿಕ ಚಟುವಟಿಕೆಗಳು, ಆರೋಗ್ಯದ ಬಗ್ಗೆ ತಿಳುವಳಿಕೆ ಹಾಗೂ ಮಕ್ಕಳ ಕುಶಲತೆಯನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಇ) – ಇಲ್ಲ –

ಶ್ರೀ ಜಿ.ರಾಜುಗೌಡ : 1983 ರಲ್ಲಿ ದೇವದಾಸಿ ಪದ್ಧತಿ ನಿಷೇಧ ಕಾನೂನು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿ ಬಂದರೂ ಕೂಡ ನಿಮ್ಮ ಸಮೀಕ್ಷೆಯ ಪ್ರಕಾರ ಪ್ರತಿವರ್ಷವೂ ದೇವದಾಸಿಯರ ಸಂಖ್ಯೆ ಜಾಸ್ತಿಯಾಗುತ್ತಿರುವುದು ನಿಜವೆ? 1983ರಲ್ಲಿ ಈ ಕಾನೂನು ಬಂತು. ಆದರೂ ಕೂಡ ತಮ್ಮ ಸಮೀಕ್ಷೆ ಪ್ರಕಾರ ಇವರ ಸಂಖ್ಯೆ ಪ್ರತಿವರ್ಷವೂ ಜಾಸ್ತಿಯಾಗುತ್ತಿದೆ. ಈ ಪರಿಸರದಲ್ಲಿ ಹುಟ್ಟಿರತಕ್ಕ ಹೆಣ್ಣುಮಕ್ಕಳನ್ನು 4 ವರ್ಷ ಆದಕೂಡಲೇ ಸರ್ಕಾರದವರೇ ನೇರವಾಗಿ ತೆಗೆದುಕೊಂಡು ಅವರನ್ನು ಪಾಲಿಸಿ, ಪೋಷಿಸಿ, ಬೆಳೆಸಿ, ಲಗ್ನ ಮಾಡತಕ್ಕ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಳ್ಳುವುದಕ್ಕೆ ಸಿದ್ದವಾಗಿದೆಯೆ?

ಶ್ರೀ ಬಿ. ಶಿವಣ್ಣ : ನಾವು ಸರ್ವೆ ಮಾಡಿದ ಪ್ರಕಾರ 14,197 ದೇವದಾಸಿಯರಿದ್ದಾರೆ ದೇವದಾಸಿಯರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಇದು ಸ್ವಲ್ಪಮಟ್ಟಿಗೆ ನಿಜ. 1983ರಲ್ಲಿ ಈ ಕಾನೂನು ಬಂದಮೇಲೆ ಇದರ ಬಗ್ಗೆ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದರೂ ಮಾನ್ಯ ಸದಸ್ಯರು ಹೇಳಿದಂತೆ ಸವದತ್ತಿಯಲ್ಲಿ 18 ವರ್ಷದೊಳಗಿರತಕ್ಕ ಹೆಣ್ಣುಮಕ್ಕಳ ಸಲುವಾಗಿ ಒಂದು ಹಾಸ್ಟೆಲನ್ನು ಮಾಡಿ ಅವರಿಗೆ ಎಜುಕೇಷನ್ ಮತ್ತು ಟ್ರೈನಿಂಗನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಇದೇ ರೀತಿಯಲ್ಲಿ ಅಥಣಿಯಲ್ಲಿ 50 ಹೆಣ್ಣುಮಕ್ಕಳಿಗೆ ನಾವು ಟ್ರೈನಿಂಗನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಸಾಧ್ಯವಾದಷ್ಟು ಈ ಹೆಣ್ಣುಮಕ್ಕಳಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಯಲ್ಲಮ್ಮ ದೇವಸ್ಥಾನಕ್ಕೆ ಜನರು ಬಂದು ದೇವದಾಸಿಯರನ್ನು ಬಿಡುತ್ತಿದ್ದಾರೆಂದು ಜನರು ಮೊದಲು ಆಕ್ಷೇಪವನ್ನು ಮಾಡುತ್ತಿದ್ದರು. ಕಾನೂನು ಬಿಗಿಯಾದಮೇಲೆ ಈ ಜನರು ಮೊದಲು ಊರಿನಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಹೆಣ್ಣುಮಕ್ಕಳನ್ನು ಬಿಟ್ಟು ಬಂದು ಅನಂತರ ದೇವಸ್ಥಾನಕ್ಕೆ ಕಳುಹಿಸುವುದಕ್ಕೆ ಪ್ರಾರಂಭಮಾಡಿದರು. ಇದರಿಂದಾಗಿ ಸ್ವಲ್ಪಮಟ್ಟಿಗೆ ಇವರ ಸಂಖ್ಯೆ ಜಾಸ್ತಿಯಾಗಿರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೂ ಕೂಡ ಸರ್ಕಾರದ ವತಿಯಿಂದ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ಇವರಿಗೆ ಹಾಕಿಕೊಂಡಿದ್ದೇವೆ. ಇವರಿಗೆ ಸಹಾಯ ಮಾಡಬೇಕು, ಪುನರ್‌ವಸತಿ ಕಲ್ಪಿಸಬೇಕು, ಇವರಿಗೆ ಉದ್ಯೋಗವನ್ನು ಒದಗಿಸಬೇಕು ಎನ್ನತಕ್ಕ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ತಮ್ಮ ಹತ್ತಿರ ಇನ್ನೂ ಏನಾದರೂ ಸಲಹೆಗಳಿದ್ದರೆ ಅವನ್ನು ಕೊಟ್ಟರೆ ಅವುಗಳನ್ನೂ ಕೂಡ ನಾವು ಪರಿಶೀಲಿಸುತ್ತೇವೆ.

ಶ್ರೀ ಜಿ. ರಾಜುಗೌಡ : ಮಾನ್ಯ ಉಪಾಧ್ಯಾಕ್ಷಿಣಿಯವರೆ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ನೇರವಾದ ಉತ್ತರ ಬರಲಿಲ್ಲ. ಇವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರಬಹುದು. ಆದರೆ ಈ ಕೆಟ್ಟಪದ್ಧತಿಯನ್ನು ನಿಷೇಧ ಮಾಡುವುದಕ್ಕೆ ಇವರಿಗೆ ಶಕ್ತಿ ಇಲ್ಲ. ಈ ಪರಿಸ್ಥಿತಿಯಲ್ಲಿ ಇರತಕ್ಕ ಹೆಣ್ಣುಮಕ್ಕಳನ್ನು ಗುರ್ತಿಸಿ ಅವರಿಗೆ 4 ವರ್ಷ ಆದಕೂಡಲೇ ಸರ್ಕಾರದವರೇ ನೇರವಾಗಿ ದತ್ತು ತೆಗೆದುಕೊಂಡು ಅವರನ್ನು ಪಾಲನೆ, ಪೋಷಣೆ ಮಾಡಬೇಕು ಮತ್ತು ಅವರ ಲಗ್ನವನ್ನೂ ಮಾಡತಕ್ಕ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ನಿಮ್ಮ ಕಾರ್ಯಕ್ರಮಗಳಿಂದ ಇದುವರೆಗೆ ಏನೂ ಸಾಧ್ಯವಾಗಿಲ್ಲ. ಇನ್ನೂ ಇವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದ್ದರಿಂದ ನಾನು ಹೇಳಿದಂಥ ಪದ್ಧತಿಯನ್ನು ತಾವು ಅನುಸರಿಸುತ್ತೀರಾ?

ಇನ್ನೊಂದು ವಿಚಾರ ಎಂದರೆ, ಕರ್ನಾಟಕದ ದೇವದಾಸಿಯರು ಮುಂಬಯಿ ವೇಶ್ಯಾವಾಟಿಕೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಮಾರಾಟವಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ ತಾವು ಮಹಾರಾಷ್ಟ್ರದ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ಈ ರೀತಿಯ ಮಾರಾಟವನ್ನು ತಡೆಯುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ? ನಮ್ಮಲ್ಲಿ ಇರತಕ್ಕ ದೇವದಾಸಿಯರು ಮುಂಬಯಿ ವೇಶ್ಯಾವಾಟಿಕೆಗೆ ಹೋಗುವುದನ್ನು ನಿಲ್ಲಿಸಲು ನೇರವಾಗಿ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು.

ಶ್ರೀ ಬಿ. ಶಿವಣ್ಣ : ಇತ್ತೀಚೆಗೆ ನಾವು ಮಹಾರಾಷ್ಟ್ರದ ಸಮಾಜ ಕಲ್ಯಾಣ ಖಾತೆಯ ಮಂತ್ರಿಗಳ ಜೊತೆ ಒಂದು ಮೀಟಿಂಗ್ ಮಾಡಿ ಚರ್ಚೆ ಮಾಡಿದ್ದೇವೆ.

ಶ್ರೀ ಎಸ್. ಹೆಚ್. ಕೌಜಲಗಿ : ಇದನ್ನು ಯಾವಾಗ ಫೈನಲ್ ಮಾಡುತ್ತೀರಿ?

ಶ್ರೀ ಬಿ. ಶಿವಣ್ಣ :– ಈಗ್ಗೆ 2 ತಿಂಗಳ ಹಿಂದೆ ನಾವು ಮೀಟಿಂಗ್ ಮಾಡಿದ್ದೇವೆ. ಬೆಳಗಾಂ ಡಿವಿಜನ್‌ನಲ್ಲಿ ಮೀಟಿಂಗ್ ಕರೆದು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನಾವು ಚರ್ಚೆಮಾಡಿದ್ದೇವೆ. ಮಹಾರಾಷ್ಟ್ರದ ಸಮಾಜಕಲ್ಯಾಣ ಇಲಾಖೆಯ ಮಂತ್ರಿಗಳೂ, ನಾವೂ ಕೂಡಿಯೇ ಯೋಜನೆಗಳನ್ನು ಹಾಕಿಕೊಂಡು ಆದಷ್ಟುಮಟ್ಟಿಗೆ ಇದನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ರೇಡಿಯೋ ಮೂಲಕ, ದಿನಪತ್ರಿಕೆಗಳ ಮೂಲಕ ಅಲ್ಲಲ್ಲಿ ಜನರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದೇವೆ. ಒಟ್ಟಿನಲ್ಲಿ ನಾವು ಆದಷ್ಟೂ ಈ ದೇವದಾಸಿ ಪದ್ಧತಿಯನ್ನು ನಿರ್ಮೂಲನ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಸುಮಾರು 14 ಸಾವಿರ ದೇವದಾಸಿಯರು ಈ ರಾಜ್ಯದಲ್ಲಿದ್ದಾರೆಂದು ತಾವು ಹೇಳಿದ್ದಿರಿ. ಈ ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ತಮ್ಮಲ್ಲಿ ಯಾವುದೇ ಕಾರ್ಯಕ್ರಮವು ಇಲ್ಲ. ಸಾಮಾನ್ಯವಾಗಿ 12 ವರ್ಷದ ಒಳಗಿರತಕ್ಕ ಹೆಣ್ಣುಮಕ್ಕಳನ್ನು ದೇವದಾಸಿ ಎಂದು ಮಾಡತಕ್ಕದ್ದು ಇದೆ. ಇದಕ್ಕೆ ಮೂಲಭೂತ ಕಾರಣ ಎಂದರೆ ಬಡತನ. ಬಡತನದಲ್ಲಿರತಕ್ಕ ಈ ಜನರನ್ನು ಬಡತನದಿಂದ ದೂರ ಮಾಡುವುದಕ್ಕೆ ನೀವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ.

ಇನ್ನೊಂದು ವಿಚಾರ ಎಂದರೆ ಕರ್ನಾಟಕ ರಾಜ್ಯದಲ್ಲಿ ದೇವದಾಸಿ ಪದ್ಧತಿ ಇನ್ನೂ ಮುಂದುವರಿಯುತ್ತಿದೆ ಎಂದು ಇನ್ನೂ ಅನೇಕ ಜನರು ಪ್ರಚಾರ ಮಾಡುತ್ತಿದ್ದಾರೆ. ಇದರ ಬಗ್ಗೆ ನೀವು ಏನು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೀರಿ? ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನೀವು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಂಡು ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟು ಇದನ್ನು ನಿಲ್ಲಿಸದಿದ್ದರೆ ಮುಂದೆ ಬಹಳಷ್ಟು ಜನರಿಗೆ ಕಷ್ಟವಾಗುತ್ತದೆ, ಅನ್ಯಾಯವಾಗುತ್ತದೆ. ಮತ್ತೆ ಇದೇ ಪದ್ಧತಿ ಮುಂದುವರೆಯುತ್ತದೆ. ಆದ್ದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳಬಯಸುತ್ತೇನೆ.

ಶ್ರೀ ಬಿ. ಶಿವಣ್ಣ :– ಮಾನ್ಯ ಅಧ್ಯಕ್ಷರೇ ಸರ್ಕಾರದಿಂದ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವಂಥದ್ದಕ್ಕೆ ವಾಲೆಂಟರಿ ಆರ್ಗನೈಸೇಷನ್‌ಗಳೂ ಕೂಡ ಮುಂದೆ ಬಂದಿವೆ. ಸಾಕಷ್ಟು ಸೋಷಿಯಲ್ ಪ್ರಾಬ್ಲಮ್ ಇರುವುದರಿಂದ ಎಲ್ಲ ಜನರು, ಮಾನ್ಯ ಸದಸ್ಯರೂ ಸಹಾಯ ಮಾಡಬೇಕಾಗುತ್ತದೆ. ಏತಕ್ಕೆಂದರೆ ಸರ್ವೆ ಮಾಡತಕ್ಕಂಥದ್ದು ಸರ್ಕಾರದವತಿಯಿಂದ ಆಗಬಹುದು. ಆದರೆ ಬಹಳ ವರ್ಷಗಳಿಂದ ಅವರು ತಮ್ಮ ಮೂಡನಂಬಿಕೆಯನ್ನು ಇಟ್ಟುಕೊಂಡಿರುವುದರಿಂದ ಈ ಪದ್ಧತಿ ಇರುತ್ತದೆ. ಇದರಿಂದ ಅವರನ್ನು ಸಂಪೂರ್ಣವಾಗಿ ದೂರ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ ಸರ್ಕಾರದವರು ಈ ಕೆಲಸವನ್ನು ಮಾಡುವುದು ಬಿಟ್ಟು ವಾಲೆಂಟಿಯರ್ ಆರ್ಗನೈಸೇಷನ್ಸ್‌ಗೆ ಏತಕ್ಕೆ ವಹಿಸಿಕೊಡಬೇಕು. ಇದು ಸರ್ಕಾರದ ಕೆಲಸ. ತಾವು ಮಾಡಬೇಕು. ವಾಲಂಟರಿ ಆರ್ಗನೈಸೇಷನ್ಸ್ ಕೂಡ ಮುಂದೆ ಬರಲಿ, ಆದರೆ ಇದು ನಿಮ್ಮ ಕೆಲಸ, ನಿಮ್ಮ ಅಧಿಕಾರಿಗಳ ಕೆಲಸವೇನು? ನೀವು ಬೇರೆಯವರಮೇಲೆ ಹೊರಿಸಿದರೆ, ನೀವು ಮಾಡತಕ್ಕಂಥ ಕಾರ್ಯಕ್ರಮಗಳಿಗೆ ಇದು ಸರಿಯಾದ ಉತ್ತರವಲ್ಲ. ದಯವಿಟ್ಟು ತಾವಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಮುಂದೆ ಬರತಕ್ಕಂಥ ದಿವಸಗಳಲ್ಲಿ ತೆಗೆದುಕೊಳ್ಳತಕ್ಕಂಥ ಭರವಸೆಯನ್ನು ಈ ಸದನಕ್ಕೆ ಕೊಡಬೇಕು.

ಶ್ರೀ ಬಿ. ಶಿವಣ್ಣ : ಆಗಬಹುದು.

Sri. J.S. Sridhar : Last time when I asked this question Hon'ble Minister replied that last year there was not a single dedication was taken place. It is totally wrong. This year during the month of December and January there will be possibility of dedication of girls in the temple of Soundatti. Whether Government is going to establish a Special Cell in the district to stop this practice.

ಶ್ರೀ ಬಿ. ಶಿವಣ್ಣ :– ಬೆಳಗಾಮ್‌ನಲ್ಲಿ ಮತ್ತು ರಾಯಚೂರಿನಲ್ಲಿ ಆ ಪದ್ಧತಿ ಏನು ಇದೆ, ಅದರ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರು ಅದಕ್ಕೆ ಮುಂದೆ ಡಿಸೆಂಬರ್ ತಿಂಗಳಿನಲ್ಲಿ, ಜನವರಿಯಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ. ನಾವು ಇದನ್ನು ತಡೆಗಟ್ಟಲು ಅಧಿಕಾರಿಗಳಿಗೆ ಸುತ್ತೋಲೆಯನ್ನು ಈಗಾಗಲೇ ಕಳುಹಿಸಿದ್ದೇವೆ.

ಶ್ರೀ ಜಿ. ರಾಜುಗೌಡ :– ಮಾನ್ಯ ಅಧ್ಯಕ್ಷರೇ ದೇವದಾಸಿಯರನ್ನು ಲಗ್ನವಾಗುವಂಥ ಸಂದರ್ಭದಲ್ಲಿ ಪರಿಹಾರಧನವಾಗಿ ಅವರಿಗೆ ಸರ್ಕಾರದವರು ಮೂರುಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ದಯವಿಟ್ಟು ಸರ್ಕಾರದವರು ಇದನ್ನು ಹೆಚ್ಚಸಲಿಕ್ಕೆ ಸಾಧ್ಯವಾಗುತ್ತದೆಯೇ. ಧಾರ್ಮಿಕ ಹಿನ್ನಲೆಯಲ್ಲಿ ಬೆಳೆದಿರತಕ್ಕಂಥ ಈ ಪದ್ಧತಿಯ ಶೋಷಕರೇನಿದ್ದಾರೆ, ಆ ಶೋಷಕರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳತ್ತೀರಾ? ಮತ್ತು ಆ ಮಧ್ಯವರ್ತಿಗಳನ್ನು ಬಲಿಹಾಕುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ :– ದೇವದಾಸಿಯರ ಜೊತೆಯಲ್ಲಿ ಯಾರಾದರೂ ಮದುವೆ ಮಾಡಿಕೊಂಡರೆ ಅವರಿಗೆ ಮೂರು ಸಾವಿರ ರೂಪಾಯಿಗಳನ್ನು ಪರಿಹಾರ ಕೊಡುವುದು ಸರ್ಕಾರದಲ್ಲಿದೆ.

ಶ್ರೀ ಪೌಕಲ್ ಎಂ. ಮಲ್ಲಪ್ಪ :– ಮಾನ್ಯ ಅಧ್ಯಕ್ಷೆಣಿಯವರೇ ನಾನು 491ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷೆಣಿಯವರೇ ಇದು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟದ್ದು. ಇದನ್ನು ಅವರಿಗೆ ಟ್ರಾನ್ಸಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ. ಸಿದ್ದನಗೌಡ :– ಮಾನ್ಯ ಸಚಿವರಿಗೆ ಯಾವಯಾವಖಾತೆಗೆ ಯಾರು ಯಾರು ಸಚಿವರು ಎನ್ನುವುದೇ ಗೊತ್ತಿಲ್ಲ. ಯಾವ ಪ್ರಶ್ನೆಯನ್ನು ಕೇಳಿದರೂ ನನಗೆ ಸಂಬಂಧಿಸಿದ್ದಲ್ಲವೆಂದು ಹೇಳುತ್ತಾರೆ.

ಶ್ರೀ ಪೌಕಲ್ ಎಂ. ಮಲ್ಲಪ್ಪ :– ಇದು ಸಮಾಜ ಕಲ್ಯಾಣ ಇಲಾಖೆಗೆ ಬರುತ್ತದೆ. ಅಂಗವಿಕಲರಿಗೆ ಸಂಬಂಧಪಟ್ಟದ್ದು..

ಉಪಾಧ್ಯಕ್ಷೆಣಿಯವರು :– ಈ ಪ್ರಶ್ನೆಯನ್ನು ಸಂಬಂಧಪಟ್ಟ ಇಲಾಖೆಗೆ ವರ್ಗಾಯಿಸಿರುತ್ತೇನೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಬಗ್ಗೆ

613. ಶ್ರೀ ಬಿ.ಎಸ್.ಬನ್ನಿಕೋಡ್ (ಹಿರೇಕೆರೂರು) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಜನಾಂಗದ ಹಾಗೂ ಹಿಂದುಳಿದ ಪಂಗಡದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಪ್ರಸಾದ ನಿಲಯಗಳು ಮತ್ತು ವಸತಿನಿಲಯಗಳಲ್ಲಿ ಅವಶ್ಯವಿರುವ ನೌಕರರು ಇಲ್ಲದೆ ಇರುವುದರಿಂದ ದಿನಗೂಲಿ ನೌಕರರು ಕೆಲಸ ನಿರ್ವಹಿಸುವುದರಿಂದ ಅಲ್ಲಿನ ವ್ಯವಸ್ಥೆ ಹದಗೆಟ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಸದರಿ ವಸತಿನಿಲಯಗಳನ್ನು ಸುವ್ಯವಸ್ಥೆಯಿಂದ ನಡೆಸಲು ಈಗಾಗಲೇ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರನ್ನು ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

(ಇ) ಹಾಗಿದ್ದಲ್ಲಿ, ಖಾಯಂ ನೌಕರರನ್ನು ಭರ್ತಿ ಮಾಡಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ? ಹಾಗಿದ್ದಲ್ಲಿ ಜರುಗಿಸಿದ ಕ್ರಮವೇನು?

ಶ್ರೀ. ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):–

(ಅ) ಇಲ್ಲ